

# ಸರಯೂ

सरयू

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
**January Vol. : 12 Issue : 8** 5127/ ವಿಶ್ವಾವಸು ಸಂವತ್ಸರ ಜನವರಿ 2026 ಪುಟ 8 **Rs. 10/-**

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

## ಕಲ್ಲಡ್ಕ ಕ್ರೀಡೋತ್ಸವ

**21.12.2025**
**ಭಾನುವಾರ**



ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕದ ಬಹು ನಿರೀಕ್ಷಿತ ಕಾರ್ಯಕ್ರಮಗಳಲ್ಲಿ ಒಂದಾದ ಕ್ರೀಡೋತ್ಸವ ಪ್ರತೀ ವರ್ಷದಂತೆ ಈ ವರ್ಷವೂ ತನ್ನದೇ ಆದ ವೈಶಿಷ್ಟ್ಯಗಳೊಂದಿಗೆ ಸಂಪನ್ನಗೊಂಡಿದೆ.

* ಮೈಸೂರು ಸಂಸ್ಥಾನದ ಮಹಾರಾಜ ಶ್ರೀ ಯದುವೀರ್ ಕೃಷ್ಣದತ್ತ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಿ ಮಕ್ಕಳ ಪ್ರತಿಭಾ ಪ್ರದರ್ಶನವನ್ನು ವೀಕ್ಷಿಸಿದರು.
* 2.00 ಗಂಟೆಯ ಕಾಲಾವಧಿಯಲ್ಲಿ 19 ರೀತಿಯ ವೈವಿಧ್ಯಮಯ ಕಾರ್ಯಕ್ರಮಗಳು
* ಹೊನಲು ಬೆಳಕಿನಲ್ಲಿ ವಿದ್ಯಾರ್ಥಿಗಳ ಪ್ರತಿಭಾ ಸಂಗಮ
* 3717 ವಿದ್ಯಾರ್ಥಿಗಳ ಭಾಗವಹಿಸುವಿಕೆ
* 10000ಕ್ಕೂ ಅಧಿಕ ಜನಸ್ತೋಮ
* ರಾಷ್ಟ್ರಮಟ್ಟದ ಗಣ್ಯಾತಿಗಣ್ಯರ ಪಾಲ್ಗೊಳ್ಳುವಿಕೆ
* ವೈಯಕ್ತಿಕ ಪ್ರದರ್ಶನದಿಂದ ತೊಡಗಿ ಸಾವಿರಾರು ವಿದ್ಯಾರ್ಥಿಗಳ ಸಾಮೂಹಿಕ ಭಾಗವಹಿಸುವಿಕೆ
* ಉಳ್ಳಾಲದ ರಾಣಿ ಅಬ್ಬಕ್ಕ 500ನೇ ವರ್ಷಾಚರಣೆ
* ಪಹಲ್ಗಾಮ್ ಘಟನೆ ಮತ್ತು ಅಪರೇಶನ್ ಸಿಂದೂರ್‌ನ ಅಣಕು ಪ್ರದರ್ಶನ
* ಸ್ವದೇಶಿ ನಿರ್ಮಿತ ಬ್ರಹ್ಮೋಸ್ ಪ್ರದರ್ಶನ
* ಎಲ್ಲಾ ಪ್ರೇಕ್ಷಕ ವೃಂದಕ್ಕೆ ಭೋಜನ ವ್ಯವಸ್ಥೆ
* ರಾಷ್ಟ್ರಮಟ್ಟದ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ
* ಸಾಲು ಮರದ ತಿಮ್ಮಕ್ಕ ಇವರ ದಿವ್ಯ ಸ್ಮರಣೆ
* ಸಂಘ ಶತಮಾನದ ಹಾಗೂ ಪಿಯುಸಿ ವಿಂಶತಿ ಆಚರಣೆ
* ಅಯೋಧ್ಯೆಯ ಧರ್ಮ ಧ್ವಜಾರೋಹಣದ ಮರು ಸೃಷ್ಟಿ





ಕ್ರೀಡೋತ್ಸವದ ವರ್ಣಮಯ ಚಿತ್ರಗಳು
ಪುಟ ಸಂಖ್ಯೆ 4 ಮತ್ತು 5ರಲ್ಲಿ....



## ಶಿಶುಮಂದಿರ



ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ, ಅಕ್ಕಮಹಾದೇವಿ ಶಿಶುಮಂದಿರ ಬಿ.ಸಿ.ರೋಡ್, ಶ್ರೀಕೃಷ್ಣ ಶಿಶುಮಂದಿರ ಕಂದೂರು ಪಾಲಕರ ಪ್ರವಾಸವನ್ನು ಹಂಪಿ ಮತ್ತು ಮಂತ್ರಾಲಯಕ್ಕೆ 29.11.2025 ರಿಂದ 1.12.2025ರವರೆಗೆ ಹಮ್ಮಿಕೊಳ್ಳಲಾಗಿತ್ತು. 49 ಪಾಲಕರು, 6 ಮಾತಾಜಿಯರು ಭಾಗವಹಿಸಿದ್ದರು.



ಹುಟ್ಟುಹಬ್ಬ ಕಾರ್ಯಕ್ರಮ 26–12–2025 ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ ಶ್ರೀಮತಿ ಅಮಿತಾ ಮಾತಾಜಿ ಇವರು ಮಕ್ಕಳಿಗೆ ಕಥೆಯ ಮೂಲಕ ಹುಟ್ಟುಹಬ್ಬದ ಮಹತ್ವವನ್ನು ತಿಳಿಸಿಕೊಟ್ಟರು. ಒಟ್ಟು 107 ಮಕ್ಕಳು 14 ಪಾಲಕರು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ



ಗೀತಾ ಜಯಂತಿ : 1.12.2025

ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದ ದಿನದ ವಿಶೇಷತೆಯನ್ನು ಪ್ರೌಢಶಾಲೆಯ ಶ್ರೀ ಜಯರಾಮ ಶ್ರೀಮಾನ್ ತಿಳಿಸಿಕೊಟ್ಟರು. ಎಲ್ಲಾ ವಿದ್ಯಾರ್ಥಿಗಳು ಭಗವದ್ಗೀತೆಯ 12ನೇ ಅಧ್ಯಾಯವನ್ನು ಪಠಿಸಿದರು. ಗೀತೋಪದೇಶದ ಕಿರುಪ್ರಹಸನವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.



ಸಂಸದರಾದ ಕ್ಯಾ. ಬ್ರಿಜೇಶ್ ಚೌಟ ಮಂಗಳೂರು ಕಂಬಳ ಪ್ರಯುಕ್ತ ಜಿಲ್ಲಾಮಟ್ಟದ ಚಿತ್ರಕಲೆ ಸ್ಪರ್ಧೆಯಲ್ಲಿ 2ನೇ ತರಗತಿಯ ನಿಧಿ ಕೈರಂಗಳ ದ್ವಿತೀಯ ಸ್ಥಾನ ಪಡೆದು ಪ್ರಸಿದ್ಧ ಒಲಿಂಪಿಕ್ಸ್ ಅಂತರಾಷ್ಟ್ರೀಯ ಬಾಕ್ಸರ್ ಮೇರಿ ಕೋಮ್‌ನಿಂದ ಬಹುಮಾನವನ್ನು ಸ್ವೀಕರಿಸಿದರು.



ಕಥಾಕಥನ 8.12.2025: ಅಧ್ಯಾಪಕರಾದ ಶ್ರೀಮತಿ ರಾಜೇಶ್ವರಿ ಎಂ. ಇವರು ಪೂರ್ವಗುರುಕುಲದ ವಿದ್ಯಾರ್ಥಿಗಳಿಗೆ ಕಥಾ ಅವಧಿಯನ್ನು ನಡೆಸಿಕೊಟ್ಟರು. ಹಾಗೂ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಿದರು.



ಬೌದ್ಧಿಕ ಸ್ಪರ್ಧೆ : 12 ರಿಂದ 16

ಈ ಶೈಕ್ಷಣಿಕ ವರ್ಷದ ಬೌದ್ಧಿಕ ಸ್ಪರ್ಧೆಗಳನ್ನು ಹಂತ ಹಂತವಾಗಿ ಆಯೋಜಿಸಲಾಗಿತ್ತು. ಸ್ಮರಣ ಶಕ್ತಿ, ಬೆಂಕಿ ಇಲ್ಲದ ಅಡುಗೆ, ಪ್ರಬಂಧ, ಚಿತ್ರಕಲೆ, ಮುಖವರ್ಣಿಕೆ, ಆಶು ಭಾಷಣ ಇತ್ಯಾದಿ ಸ್ಪರ್ಧೆಗಳನ್ನು ನಡೆಸಲಾಯಿತು.



ಕೊಲ್ಲೂರು ಪ್ರವಾಸ 3.12.25: 5ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಗೆ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಕಾಪು ಹೊಸ ಮಾರಿಗುಡಿ ದೇವಸ್ಥಾನ, ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನ, ಕೊಲ್ಲೂರು ಮೂಕಾಂಬಿಕ ದೇವಸ್ಥಾನ ಹಾಗೂ ಮುರುಡೇಶ್ವರಕ್ಕೆ ಹಮ್ಮಿಕೊಳ್ಳಲಾಯಿತು. 84 ವಿದ್ಯಾರ್ಥಿಗಳು, 10 ಅಧ್ಯಾಪಕರು ಹಾಗೂ 2 ಸಹಾಯಕಿಯರು ಭಾಗವಹಿಸಿದ್ದರು.



ಕುಂದಾಪುರ ಪ್ರವಾಸ 3.12.2025: 5ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಗೆ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನ, ಕುಂದಾಪುರ ಯುವ ಮೆರಿಡಿಯನ್ ಅಮ್ಯೂಸ್‌ಮೆಂಟ್ ಪಾರ್ಕ್ ಮತ್ತು ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನಕ್ಕೆ ಹಮ್ಮಿಕೊಳ್ಳಲಾಯಿತು. 150 ವಿದ್ಯಾರ್ಥಿಗಳು, 12 ಅಧ್ಯಾಪಕರು ಭಾಗವಹಿಸಿದ್ದರು.




ಕ್ರೀಡೋತ್ಸವ ವ್ಯವಸ್ಥಾ ದೃಷ್ಟಿಯಿಂದ ಮಾತೃಭಾರತಿ ಮತ್ತು ಶಾಲಾಭಿವೃದ್ಧಿ ಸದಸ್ಯರ ಸಭೆ ನಡೆಸಲಾಯಿತು. ಡಾ| ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು.



ಶಿಶುಮಂದಿರ ಭೇಟಿ : 30.12.2025

ಕೊಪ್ಪಳಕೋಡಿ ಸರಸ್ವತಿ ಶಿಶುಮಂದಿರ ಭೇಟಿ ನೀಡಿ ಮಕ್ಕಳಿಗೆ ಕಥೆ, ಅಭಿನಯ ಗೀತೆ ಮತ್ತು ವಿವಿಧ ಆಟಗಳನ್ನು ಆಡಿಸಿದರು.



ರಾರಾಸಂ ಫೌಂಡೇಶನ್ (25.12.2025) ನಡೆಸಿದ ಚಿತ್ರಕಲಾ ಸ್ಪರ್ಧೆಯಲ್ಲಿ 5ನೇ ತರಗತಿಯ ನಿಹಾರಿಕಾ ಎಂ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

## ಸುಭಾಷಿತ ಮಂಜರಿ

ನ ದಾನತುಲ್ಯಂ ಧನಮನ್ಯದಸ್ತಿ
ನ ಸತ್ಯತುಲ್ಯಮ್ ವ್ರತಮನ್ಯದಸ್ತಿ ।
ನ ಶೀಲತುಲ್ಯಾಂ ಶುಭಮನ್ಯದಸ್ತಿ
ನ ಕ್ಷಾಂತಿತುಲ್ಯಂ ಹಿತಮನ್ಯದಸ್ತಿ ॥

ದಾನಕ್ಕೆ ಸಮವಾದ ಸಂಪತ್ತು ಇನ್ನೊಂದಿಲ್ಲ. ಸತ್ಯಕ್ಕೆ ಸಮವಾದ ವ್ರತವಿಲ್ಲ. ಶೀಲಕ್ಕೆ ಸಮವಾದ ಶುಭವಿಲ್ಲ. ತಾಳ್ಮೆಗೆ ಸಮವಾದ ಶ್ರೇಯಸ್ಸು ಇನ್ನೊಂದಿಲ್ಲ.

### ಸಂಪಾದಕೀಯ

ಸಂಸ್ಥೆಯ ವಾರ್ಷಿಕ ವಿಶೇಷ ಕಾರ್ಯಕ್ರಮ ಕ್ರೀಡೋತ್ಸವದ ವರದಿಯೊಂದಿಗೆ ಈ ಬಾರಿಯ ಸರಯೂ ಪ್ರಕಾಶನಗೊಂಡಿದೆ. ಹಿಂದೆ ಮೈಸೂರು ಸಂಸ್ಥಾನದ ಭಾಗವೇ ಆಗಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನಮ್ಮ ಈ ವಿದ್ಯಾಸಂಸ್ಥೆಗೆ ಇದೆ ಮೊದಲ ಬಾರಿಗೆ ಮೈಸೂರು ಮಹಾರಾಜರ ಭೇಟಿ ಈ ಬಾರಿಯ ವಿಶೇಷತೆ ಹಾಗೂ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ ಒಡೆಯರ್ ಅವರು ಎರಡೂವರೆ ಗಂಟೆಗಳಿಗೂ ಹೆಚ್ಚು ಕಾಲ ಸಂಪೂರ್ಣ ಪ್ರದರ್ಶನವನ್ನು ವೀಕ್ಷಿಸಿ ವಿದ್ಯಾರ್ಥಿಗಳನ್ನು ಹರಸಿದರು. ಕ್ರೀಡೋತ್ಸವವಲ್ಲದೆ ಇನ್ನಿತರ ಪ್ರತಿಭಾ ಪುರಸ್ಕಾರಗಳು, ಶೈಕ್ಷಣಿಕ ಪ್ರವಾಸಗಳು ಹಾಗೂ ವಿಚಾರ ಸಂಕಿರಣಗಳ ವರದಿಯನ್ನು ಪ್ರಕಟಿಸಿದೆ. ಮುಂದಿನ ಶೈಕ್ಷಣಿಕ ವರ್ಷದ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಉಮಾವತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ನಿಕ್ಷಿತಾ (ಪ್ರೌಢಶಾಲೆ)
ದೀಪಿಕಾ (ಪಿಯುಸಿ)
ಅನನ್ಯ (ಪದವಿ)
ಉಷಾ(ಇಂಗ್ಲೀಷ್ ಮೀಡಿಯಂ ಸ್ಕೂಲ್)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


## ಪ್ರಾಥಮಿಕ ಶಾಲೆ



**3ನೇ ತರಗತಿ ಪ್ರವಾಸ 29.12.2025 :**
ಕಾರ್ಕಳ ಗೊಮ್ಮಟೇಶ್ವರ ಬೆಟ್ಟ, ಕೊಡ್ಯಡ್ಕ ಅನ್ನಪೂರ್ಣೇಶ್ವರಿ ದೇವಸ್ಥಾನ ಹಾಗೂ ಮೂಡಬಿದ್ರೆ ಸಾವಿರ ಕಂಬದ ಬಸದಿ ಈ ಸ್ಥಳಗಳಿಗೆ ಹಮ್ಮಿಕೊಳ್ಳಲಾಯಿತು. ಒಟ್ಟು 60 ವಿದ್ಯಾರ್ಥಿಗಳು, 3 ಅಧ್ಯಾಪಕರು, ಒಬ್ಬರು ಸ್ವಚ್ಛತಾ ಸಹಾಯಕಿಯರು ಭಾಗವಹಿಸಿದ್ದರು



**ಶ್ರೀರಾಮ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳ ಪ್ರವಾಸ** (6.12.2025) ಕೊಡ್ಯಡ್ಕ ಅನ್ನಪೂರ್ಣೇಶ್ವರಿ ದೇವಸ್ಥಾನ, ಸೀತಾ ಫಾಲ್ಸ್ ಹಾಗೂ ಉಡುಪಿಯ ಪ್ರೇಕ್ಷಣೀಯ ಸ್ಥಳಗಳಿಗೆ ಹಮ್ಮಿಕೊಳ್ಳಲಾಯಿತು. ಒಟ್ಟು 150 ವಿದ್ಯಾರ್ಥಿಗಳು ಭಾಗವಹಿಸಿದರು.

## ಪ್ರೌಢಶಾಲೆ

**ಗೀತಾ ಜಯಂತಿ ಕಾರ್ಯಕ್ರಮ** 1.12.2025 ಮಧುಕರ ಸಭಾಂಗಣದಲ್ಲಿ ನಡೆದ ಜಯಂತಿ ಕಾರ್ಯಕ್ರಮದ ಮಹತ್ವವನ್ನು ಶ್ರೀಯುತ ತೇಜಸ್ ತಿಳಿಸಿದರು. (ಪ್ರಬೋಧಿನೀ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಿದ್ದು ಪ್ರಸ್ತುತ ಶ್ರೀರಾಮ ವಿದ್ಯಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ)





**ಅಟಲ್ ಟಿಂಕರಿಂಗ್ ಫೆಸ್ಟ್:** 3.12.2025ರಂದು ಪೌಢಶಾಲೆ ಮತ್ತು ಪದವಿ ಪೂರ್ವ ವಿಭಾಗದ ಸಹಯೋಗದೊಂದಿಗೆ ನಡೆಯಿತು. ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ, ವಿಟ್ಲ ವಲಯದ ಶಿಕ್ಷಣ ಸಂಯೋಜಕಿ ಶ್ರೀಮತಿ ಸುಧಾ, ಪ.ಪೂ ವಿಭಾಗದ ಪ್ರಾಂಶುಪಾಲರಾದ ವಸಂತ ಬಲ್ಲಾಲ್ ಮತ್ತು ಪ್ರೌಢಶಾಲಾ ಮುಖ್ಯಗುರುಗಳಾದ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದಲ್ಲಿ ಪದವಿ ವಿಭಾಗದ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್, ಶಿಕ್ಷಣ ಪರಿವೀಕ್ಷಕರಾದ ಲಕ್ಷ್ಮಿ ರಘುರಾಜ್ ಪ. ಪೂ. ವಿಭಾಗದ ಪ್ರಾಂಶುಪಾಲರಾದ ವಸಂತ ಬಲ್ಲಾಲ್, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಎಂ., ಇಂಗ್ಲೀಷ್ ಮೀಡಿಯಂ ಸ್ಕೂಲ್‌ನ ಪ್ರಾಂಶುಪಾಲರು ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು. ಹಿರಿಯ ವಿದ್ಯಾರ್ಥಿ ಶ್ರೀ ರಂಜಿತ್ ಏರ್ ಶೋ ಮತ್ತು ಫ್ಲವರ್ ಶೋ ನಡೆಸಿಕೊಟ್ಟನು. ಕಾರ್ಯಕ್ರಮಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಎಂಟು ಶಾಲೆಗಳಿಂದ 154 ವಿದ್ಯಾರ್ಥಿಗಳು ಮತ್ತು 16 ಶಿಕ್ಷಕರು ಭಾಗವಹಿಸಿದ್ದರು.





**ತಂಬಾಕು ನಿಯಂತ್ರಣ ಜಾಗೃತಿ** ಕಾರ್ಯಕ್ರಮವನ್ನು (5.12.2025) ಶ್ರೀಮತಿ ದಿಶಾ ಕುಮಾರಿ (ದಂತ ವೈದ್ಯರು, ಎ.ಬಿ ಶೆಟ್ಟಿ ಮೆಮೋರಿಯಲ್ ಇನ್ಸ್ಟಿಟ್ಯೂಟ್ ಡೆಂಟಲ್ ಸೈನ್ಸಸ್ ಮಂಗಳೂರು), ಕುಮಾರಿ ಸ್ವಾತಿ ಮತ್ತು ಕುಮಾರಿ ಸುನಿತಾ (ಇಂಡಿಯನ್ ಕ್ಯಾನ್ಸರ್ ಸೊಸೈಟಿ ಮಂಗಳೂರು, ಮೆಡಿಕಲ್ ಸೋಶಿಯಲ್ ವರ್ಕರ್)ನಡೆಸಿಕೊಟ್ಟರು. ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ್ ಎಂ. ಉಪಸ್ಥಿತರಿದ್ದರು.

## ಇಂಗ್ಲೀಷ್ ಮೀಡಿಯಂ




**ಜಿಲ್ಲಾಮಟ್ಟದ ಚಿತ್ರ ಕಲಾ ಸ್ಪರ್ಧೆ ಪ್ರಥಮ ಸ್ಥಾನ** 24/12/2025 ಜಿಲ್ಲಾಮಟ್ಟದಲ್ಲಿ ಮಂಗಳೂರು ಜಿಲ್ಲಾಮಟ್ಟದಲ್ಲಿ ಕಂಬಳ ಕಲರ್ ಕೂಟ ವರ್ಣ ಚಿತ್ರ ಸ್ಪರ್ಧೆಯಲ್ಲಿ ಪ್ರೌಢ ವಿಭಾಗದ ಸ್ಪರ್ಧೆಯಲ್ಲಿ ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆ ಕಲ್ಲಡ್ಕ 8ನೇ ತರಗತಿಯ ನಿನಾದ್ ಕೈರಂಗಳ ಪ್ರಥಮ ಸ್ಥಾನ ಪಡೆದುಕೊಂಡಿದ್ದು, ಖ್ಯಾತ ಕ್ರೀಡಾಪಟು ಮೇರಿಕೋಮ್ ಇವರಿಂದ ಪ್ರಶಸ್ತಿ ಸ್ವೀಕರಿಸಿದರು.






PUC
20





150














## ಇಂಗ್ಲೀಷ್ ಮೀಡಿಯಂ ಸ್ಕೂಲ್



ತಾರಾಲಯಕ್ಕೆ ಭೇಟಿ 06.12.25: ಶ್ರೀ ರಾಮ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ವಿವೇಕಾನಂದ ಸೆಂಟ್ರಲ್ ಸ್ಕೂಲ್ ಪುತ್ತೂರು ಇಲ್ಲಿನ ತಾರಾಲಯಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.




ಪ್ರತಿಭಾ ಪುರಸ್ಕಾರ ಕಾರ್ಯಕ್ರಮ 31.12.25 ಡಾ. ಪ್ರಭಾಕರ ಭಟ್ ಕಲ್ಲಡ್ಕ, ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಸದಾಶಿವ ಎಂ. ಭಟ್, ಶ್ರೀ ವೆಂಕಟರಮಣ ಮಂಕುಡೆ ಹಾಗೂ ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು.



ರಾಜ್ಯ ಮಟ್ಟಕ್ಕೆ ಆಯ್ಕೆ : 22/12/2025 ದ.ಕ.ಜಿಲ್ಲಾಮಟ್ಟದ ಪ್ರತಿಭಾಕಾರಂಜಿ ಸ್ಪರ್ಧೆಯಲ್ಲಿ 7ನೇ ತರಗತಿಯ ಮುಕುಂದ ಕೃಷ್ಣ ಸಂಸ್ಕೃತ ಕಂಠಪಾಠ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.

## ಪದವಿ ಪೂರ್ವ



**ರಾಜ್ಯ ಮಟ್ಟಕ್ಕೆ ಆಯ್ಕೆ 16.12.25**

ಶಾಲಾ ಶಿಕ್ಷಣ ಇಲಾಖೆ(ಪ.ಪೂ) ದ.ಕ ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಬಾಲಕರ ವಿಭಾಗದ 52ಕೆ.ಜಿ ವಿಭಾಗದಲ್ಲಿ ಶ್ರವಣ್ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



**ಮಾಹಿತಿ ಕಾರ್ಯಾಗಾರ 29.12.2025**

ದ್ವಿ. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ವಿವೇಕಾನಂದ ಫಾರ್ಮಸಿ ಕಾಲೇಜು ಪುತ್ತೂರು ಇದರ ಪ್ರಾಂಶುಪಾಲರಾದ ಡಾ. ಗುರುರಾಜ್ ರವರು ಫಾರ್ಮಸಿ ಕೋರ್ಸಿನ ಬಗ್ಗೆ ಮಾಹಿತಿ ನೀಡಿದರು.



ವಿಂಶತಿ ಸಂಭ್ರಮದ ಪ್ರಯುಕ್ತ 22.12.25, 23.12.25 ರಂದು ದ್ವಿ.ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ದಾಂಡೇಲಿ ನಿಸರ್ಗ ಸೌಂದರ್ಯ ಧಾಮ ಮತ್ತು ಕಾಳಿ ಜಲಾಶಯ ವೀಕ್ಷಣೆ ಮಾಡಲು 2 ದಿವಸದ ಪ್ರವಾಸವನ್ನು ಹಮ್ಮಿಕೊಳ್ಳಲಾಯಿತು 40 ವಿದ್ಯಾರ್ಥಿಗಳು ಭಾಗವಹಿಸಿದರು.



**ಸಾಂಸ್ಕೃತಿಕ ಕಲರವ 25.12.2025**

ರಾರಾಸಂ ಫೌಂಡೇಶನ್ ಬಂಟ್ವಾಳ ಆಯೋಜಿಸಿದ ರಾರಾ ಸಂಭ್ರಮ ಸಾಂಸ್ಕೃತಿಕ ಕಲರವ ಛದ್ಮವೇಷ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಚಿಂತನ ಇವರು ಪ್ರಥಮ ಸ್ಥಾನ ಪಡೆದಿರುತ್ತಾರೆ




**ಮಾಹಿತಿ ಕಾರ್ಯಾಗಾರ 30.12.2025**

ದ್ವಿ. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ವಿವೇಕಾನಂದ ಇಂಜನಿಯರಿಂಗ್ ಕಾಲೇಜಿಗೆ ಭೇಟಿ ನೀಡಿ ಇಂಜನಿಯರಿಂಗ್ ಪದವಿಯ ಕುರಿತು ಮಾಹಿತಿ ಪಡೆದು Poster making ಬಗೆಗಿನ ಕಾರ್ಯಾಗಾರದಲ್ಲಿ 119 ವಿದ್ಯಾರ್ಥಿಗಳು ಅಕ್ಷಿತಾ ಮಾತಾಜಿ ಹಾಗೂ ಶ್ವೇತಾ ಮಾತಾಜಿ ಉಪಸ್ಥಿತರಿದ್ದರು




**ಪ್ರತಿಭಾ ಪುರಸ್ಕಾರ 31.12.2025**

ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಉದ್ಘಾಟಿಸಿ ಮಾರ್ಗದರ್ಶನ ಮಾಡಿದರು. ಶ್ರೀಮತಿ ಅಕ್ಷತಾ ಪ್ರಾಂಶುಪಾಲರು ವಿವೇಕಾನಂದ ಕಾನೂನು ಮಹಾವಿದ್ಯಾಲಯ ಪುತ್ತೂರು ಡಾ. ಆರ್ ರಾಮಚಂದ್ರರಾವ್ ನಿವೃತ್ತ ಹಿರಿಯ ವಿಜ್ಞಾನಿ ಎನ್.ಎ.ಎಲ್ ಬೆಂಗಳೂರು, ಶ್ರೀ ಚಂದ್ರಶೇಖರ ಶೆಟ್ಟಿ ನಿರ್ದೇಶಕರು ಪ್ರಾಥಮಿಕ ವ್ಯವಸಾಯ ಸೇವಾ ಸಹಕಾರಿ ಸಂಘ ವಾಮದಪದವು ಹಾಗೂ ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು.

## ವಿವಿಧ ವಿಭಾಗಗಳಲ್ಲಿ ಪ್ರತಿಭಾ ದಿನೋತ್ಸವ





ಶ್ರೀರಾಮ ಪ್ರೌಢಶಾಲೆ







ಶ್ರೀರಾಮ ಪದವಿಪೂರ್ವ ವಿದ್ಯಾಲಯ

## ಪ್ರಥಮದರ್ಜೆ ಮಹಾವಿದ್ಯಾಲಯ

**ರಾಷ್ಟ್ರೀಯ ವಿಚಾರ ಸಂಕಿರಣ ಭಗವದ್ಗೀತಾ ಭಾರತೀಯ ಜ್ಞಾನಾಲೋಕಃ" 02–12–2025**






ಕಾಲೇಜಿನ ಸಂಸ್ಕೃತ ವಿಭಾಗ ಹಾಗೂ IQAC ಸಹಯೋಗದಲ್ಲಿ ಮತ್ತು ಜನಕಲ್ಯಾಣ ಟ್ರಸ್ಟ್. ನಾಟಿ ನರಿಕೊಂಬು ಇವರ ಸಹಕಾರದಲ್ಲಿ ಗೀತಾಜಯಂತಿಯ ಪ್ರಯುಕ್ತ ಭಗವದ್ಗೀತಾ – ಭಾರತೀಯ ಜ್ಞಾನಾಲೋಕ" ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಯಿತು. ರಾ.ಸ್ವ.ಸಂ.ನ ಹಿರಿಯರಾದ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಇವರು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಭಗವದ್ಗೀತೆಯಲ್ಲಿ ವಿಷಯ ವೈವಿಧ್ಯತೆ ಎಂಬ ವಿಷಯದ ಕುರಿತು ಪ್ರೊ. ಡಾ. ಕೆ ಉಣ್ಣಿಕೃಷ್ಣನ್ ಸಿಂಡಿಕೇಟ್ ಸದಸ್ಯರು ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ ಕಾಲಟಿ ಕೇರಳ ಹಾಗೂ ಡಾ। ವಿನಾಯಕ ಸಿ. ಭಟ್ಟ ಗಾಳಿಮನೆ, ಸಂಸ್ಕೃತ ವಿಭಾಗ ಮುಖ್ಯಸ್ಥರು ಆಳ್ವಾಸ್ ಕಾಲೇಜು (ಸ್ವಾಯತ್ತ) ಮೂಡಬಿದಿರೆ "ಭಗವದ್ಗೀತೆಯಲ್ಲಿ ನಿರ್ವಹಣಾ ಕೌಶಲ್ಯ" ಎಂಬ ವಿಷಯದ ಗೋಷ್ಠಿಗಳನ್ನು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ ಇವರು ವಹಿಸಿದ್ದರು. ಉಪಪ್ರಾಂಶುಪಾಲ ಯತಿರಾಜ ಪಿ. ಸ್ವಾಗತಿಸಿ. ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ಪ್ರಸನ್ನ ಕುಮಾರಿ ಪ್ರಸ್ತಾವನೆಗೈದು, ವಿದ್ಯಾರ್ಥಿನಿ ಕು ಅಕ್ಷತಾಲಕ್ಷ್ಮೀ ವಂದಿಸಿದರು.




ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ 06.12.2025ರಂದು ಮಂಜೇಶ್ವರ ಸಮೀಪದ ದೈಗೋಳಿಯ ಸಾಯಿನಿಕೇತನ ಸೇವಾಶ್ರಮಕ್ಕೆ ಭೇಟಿ ನೀಡಲಾಯಿತು. ಶ್ರಮದಾನ, ಆಶ್ರಮವಾಸಿಗಳ ಜೊತೆಗೆ ಪರಿಚಯ, ಮಾತುಕತೆ, ಭೋಜನ, ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಭಾ ಕಾರ್ಯಕ್ರಮದಲ್ಲಿ ಸಾಯಿನಿಕೇತನ ಸೇವಾಶ್ರಮದ ಸಂಸ್ಥಾಪಕ ದಂಪತಿಗಳಾದ ಡಾ. ಉದಯಕುಮಾರ್ ನೂಜಿ ಹಾಗೂ ಡಾ. ಶಾರದಾ ಉದಯಕುಮಾರ್ ಉಪಸ್ಥಿತರಿದ್ದು ಹಿತನುಡಿಗಳನ್ನಾಡಿದರು. ರಾಜ್ಯಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮಿ ಧನ್ಯವಾದ ನೆರವೇರಿಸಿದರು. ಸಹಯೋಜನಾಧಿಕಾರಿ ದೀಕ್ಷಿತ್ ಹಾಗೂ ಉಪನ್ಯಾಸಕಿಯರಾದ ಪ್ರಸನ್ನಾ, ದಿವ್ಯಾ, ಆಶಲತಾ, ಜಯಲಕ್ಷ್ಮಿ ಉಪಸ್ಥಿತರಿದ್ದರು.



**ಶೈಕ್ಷಣಿಕ ಪ್ರವಾಸ : 4.12.25 ರಿಂದ 7.12.25**

ಪದವಿ ವಿಭಾಗದ ಶೈಕ್ಷಣಿಕ ಪ್ರವಾಸವು ಕೇರಳದ ಕೊಚ್ಚಿನ್‌ಗೆ ಆಯೋಜಿಸಲಾಗಿತ್ತು. ಭಗವತಿ ದೇವಸ್ಥಾನ, ಹಿಲ್ ಪ್ಯಾಲೇಸ್, marine ಡ್ರೈವ್, mattancherry beach, wonderla, lulu ಮಾಲ್, ಪೋರ್ಟ್ ಕೊಚ್ಚಿ beach ಸ್ಥಳಗಳನ್ನು ವೀಕ್ಷಿಸಲಾಯಿತು. 66 ವಿದ್ಯಾರ್ಥಿಗಳು, 13 ಉಪನ್ಯಾಸಕರು ಭಾಗಿಗಳಾದರು.

## ಶ್ರೀರಾಮ ವಿದ್ಯಾಕೇಂದ್ರಕ್ಕೆ ಪೂಜ್ಯ ಸ್ವಾಮೀಜಿಯವರ ಭೇಟಿ ದಿನಾಂಕ: 31.12.25








ಶ್ರೀ ಶ್ರೀ ವೇದವರ್ಧನ ಶ್ರೀಪಾದಂಗಳವರು ಶ್ರೀರಾಮ ವಿದ್ಯಾಕೇಂದ್ರಕ್ಕೆ ಭೇಟಿ ನೀಡಿ, ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ವಿದ್ಯಾರ್ಥಿಗಳ ದೈನಂದಿನ ಪ್ರಾರ್ಥನೆಯಾದ ಸರಸ್ವತಿ ವಂದನೆಯನ್ನು ವೀಕ್ಷಿಸಿ "ಶರೀರವು ಇರುವುದು ಪರೋಪಕಾರಕ್ಕಾಗಿ ನಾವು ಕಲಿತಿರುವ ವಿದ್ಯೆಯನ್ನು ದೇಶಕ್ಕೆ ಪ್ರೇರಕವಾಗುವಂತೆ ಮಾಡಬೇಕು, ಸಂಸ್ಕಾರ ಮತ್ತು ಗುಣಗಳಿಂದ ದೇಶವನ್ನು ಕಟ್ಟಲು ವಿದ್ಯೆ ಅಗತ್ಯವಾಗಿದೆ" ಎಂದು ವಿದ್ಯಾರ್ಥಿಗಳಿಗೆ ಆಶೀರ್ವಚನ ಮಾಡಿದರು. ವೇದಿಕೆಯಲ್ಲಿ ಪೂಜ್ಯ ಸ್ವಾಮೀಜಿಯವರ ಪೂರ್ವಾಶ್ರಮದ ತಂದೆಯಾದ ಶ್ರೀ ಉದಯ ಕುಮಾರ ಹಾಗೂ ತಾಯಿ ಉಪಸ್ಥಿತರಿದ್ದರು. ವಿದ್ಯಾಕೇಂದ್ರದ ಸಂಸ್ಥಾಪಕರಾಗಿರುವ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಹಾಗೂ ವಿದ್ಯಾಕೇಂದ್ರದ ಸಂಚಾಲಕರಾಗಿರುವ ಶ್ರೀ ವಸಂತ ಮಾಧವ ಶ್ರೀಮಾನ್, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಪದ್ಮನಾಭ ಕೊಟ್ಟಾರಿ, ಶ್ರೀ ಮುರಳಿಧರ, ಡಾ. ಕಮಲ ಪ್ರಭಾಕರ್ ಭಟ್, ಶ್ರೀ ಕೃಷ್ಣಪ್ರಸಾದ್ ಕಾಯರ್ ಕಟ್ಟೆ, ಶ್ರೀ ಸೂರ್ಯನಾರಾಯಣ ಭಟ್ ಕಶೆಕೋಡಿ ಹಾಗೂ ಆಡಳಿತ ಮಂಡಳಿಯ ಸದಸ್ಯರು, ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು.

## ವಾರ್ಷಿಕ ಕ್ರೀಡಾಕೂಟ 08.12.2025 ಮತ್ತು 09.12.2025








ಶ್ರೀರಾಮ ವಿದ್ಯಾಕೇದ್ರದ 2025–26ನೇ ಸಾಲಿನ ವಾರ್ಷಿಕ ಕ್ರೀಡಾಕೂಟವು ಈ ಬಾರಿ ಎರಡು ದಿವಸ ವಿದ್ಯಾಕೇಂದ್ರದ ಎಲ್ಲಾ ಸಂಸ್ಥೆಗಳು ಒಟ್ಟಿಗೆ ಸೇರಿ ನಡೆಸಲಾಯಿತು. ಓಟ, ಜಿಗಿತ, ಎಸೆತ, ದ್ವಿಚಕ್ರ ವಾಹನ ಚಾಲನೆ, ಸೈಕಲ್ ರೇಸ್, ಹಗ್ಗಜಗ್ಗಾಟ ಇತ್ಯಾದಿ ಆಟೋಟ ಸ್ಪರ್ಧೆಗಳನ್ನು ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ನಡೆಸಲಾಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ಕ್ರೀಡಾಕೂಟದ ಉದ್ಘಾಟನೆಯನ್ನು ದೀಪ ಪ್ರಜ್ವಲನದ ಮೂಲಕ ನೆರವೇರಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಶ್ರೀರಾಮ ವಿದ್ಯಾ–ಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್, ಶ್ರೀರಾಮ ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಪದವಿ ಪ್ರಾಂಶುಪಾಲರಾದ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು.


ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | |
|---|---|
| ಚಿನ್ನಾಭರಣ ಸಾಲ | – 11% |
| ಜಾಮೀನು ಸಾಲ | – 16.5% |
| ಅಡವು ಸಾಲ | – 13.5% |
| ವಾಹನ ಸಾಲ | – 12% |
| ಗೃಹ ನಿರ್ಮಾಣ ಸಾಲ | – 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 7% |
| 92ರಿಂದ 181 ದಿನಗಳು | – 7.5% |
| 182 ರಿಂದ 364 ದಿನಗಳು | – 8.5% |
| 1 ವರ್ಷ ಮತ್ತು ಮೇಲ್ಪಟ್ಟು | – 9.5% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2025-27 Licensed to Post without pre-payment License No: SK/WPP/PTR/117/2025-27

ಸರಯೂ

Vol. : 12 Issue : 8 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in, www.srvk.org
E-mail : sriramakalladka@gmail.com


BOOK POST

ಸವಿಧೇ,


Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363